

ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ ಕಬ್ಬಿನ ಕಟಾವು ನಿರತ ರೈತರು
ಚಿತ್ರ: ಪ್ರಶಾಂತ್ ಎಚ್.ಜಿ.

# ಸಕ್ರಿ ಸಂಕೇಶ್ವರ

■ ರವೀಂದ್ರ ವೀ ಮುನ್ನೋಳಿಮಠ

ನಮ್ಮೂರ ಹೆಸರು ಸಂಕೇಶ್ವರ. ಇದ ಎಲ್ಲಿ ಬತ್ತ ಅಂದ್ರೀ? ಬೆಳಗಾವಿ ಜಿಲ್ಲಾ ಹುಕ್ಕೇರಿ ತಾಲೂಕಿನ್ಯಾಗ ಐತ್ರಿ. ಪೂನಾ ಬೆಂಗ್ಳೂರ ಹೈವೇ ನಮ್ಮೂರಾಗ ಹಾದ ಹೋಗೇತಿ. ದಕ್ಷಿಣ ಕಡೀಂದ ಬಂದ್ರ ನೀಂವ್ ನಮ್ಮ ಸಕ್ಕರಿ ಕಾರ್ಖಾನೆ ದಾಟೀನ ಊರಾಗ ಬರ್ಬೇಕ. ಹಂಗಅಲ ಒಂದೀಟ ಮಗ್ಗ್ಲಾಕ ಬಂದ್ರ ಹಿರಣ್ಯಕೇಶಿ ಹೊಳಿ ಹತ್ತತೇತಿ. ಮಳಿಗಾಲದಾಗ ಏನರ ಈ ಕಡೀಂದ ಬರಾವ್ರಾದ್ರ ನಾವ್ಯಾಗ ಕುಂತಅಲ ಊರಿಗಿ ಬರ್ಬೇಕ. ಹೊಳಿ ದಂಡಿಗಿ ಶಂಕರಲಿಂಗನ ಗುಡಿ ಐತಿ. ಈ ಗುಡೀನ ಆಗಿನ ಕಾಲದಾಗ ದೈತ್ಯರ ಒಂದಅಲ ರಾತ್ರ್ಯಾಗನ ಕಟ್ಟಿ ಒಗದ್ದಾರಂತ ಮಂದಿ ಮಾತಾಡಕೋತಾರ.

ಸ್ವಾತಂತ್ರ್ಯ ಚಳವಳಿ ಕಾಲದಾಗ ನಮ್ಮ ಊರಿಗಿ ಮಹಾತ್ಮಾ ಗಾಂಧಿ ಬಂದಿದ್ರಂತ. ಅವ್ರು ಲಡಾಯಿ ಟೈಮ್ಯಾಗ ಇಲ್ಲಿ ಬಂದ ಭಾಷಣ ಮಾಡಿ ಹೋಗ್ಯಾರಂತ. ಅದಕ್ಕ ಆ ಜಾಗಾಕ ಗಾಂಧಿ ಚೌಕ್ ಅಂತ ಹೆಸರ ಬಿದ್ದೇತಿ. ನಮ್ಮೂರಾಗ ನೌಕರಿ ಮಂದಿ ಕಮ್ಮಿ. ರೈತೇಕಿ ಮಂದ್ಯನಅಲ ಹೆಚ್ಚ. ಭಮ್ಮುಕ (ಭೂಮಿಕಾಯಿ {ಶೇಂಗಾ}), ಜ್ವಾಳಾ, ಒಣಾ ಮೆಣಸಿನಕಾಯಿ, ತಂಬಾಕ, ಕಬ್ಬ ಬೆಳೀತಾರ. ಹೇಳೂವಂಥಾ ನೀರಾವರಿ ಏನ ಅಲ್ಲ ನಮ್ಮ ಹೊಲಗೋಳು. ಒಣ ಬೇಸಾಯನ ಭಾಳ. ಊರಾಗ ಹೊಳಿ ಹರದ್ರೂ ಅದ ಹನ್ಯಾಡ ತಿಂಗಳ ಏನ ಹರ್ಯೂದುಲ್ಲ. ಬ್ಯಾಸ್ಗ್ಯಾಗ ಬತ್ತತೇತಿ. ಮಳಿಗಾಲದಾಗ ಊರಕ್ಕ ಊರಅಲ ಮುನುಗುವಂಗ ಹರೀತೇತಿ!

ಮಜಾ ಅಂದ್ರ ಹೊಳಿ ಅಚೀಕ ಹ್ವಾದ್ರ ಮಹಾರಾಷ್ಟ್ರ; ಇಚೀಕ ಬಂದ್ರ ಕರ್ನಾಟಕ! ಮದ್ಲೇಕ ಮದ್ಲೇಕ ನಮ್ಮ ಕಡೇ ಎಲ್ಲಾ ಸಾಂಗ್ಲಿ ಸಂಸ್ಥಾನದ ಕಾರಭಾರ ಇತ್ತಂತ. ಹೇಳಿ ಕೇಳಿ ಪೇಶ್ವೆಗೋಳು ಸತ್ತಾದಾಗ ಇದ್ದಾವ್ರು. ಅದ್ಕ ಮರಾಠಿ ಪ್ರಭಾವನೂ ಐತಿ. ಆಗ ಕನ್ನಡಾ ಸಾಲಿ ಇದ್ದಿರಲಿಲ್ಲಂತ. ಕನ್ನಡ ಮಂದಿನೂ ಮರಾಠೀನ ಕಲೀಬೇಕಾಗತಿತ್ತ. ಹಿಂಗಾಗಿ ಭಾಳ ಪಂಚೇತಿ ಹಿಡದಿತ್ತ. ನಮ್ಮ ಕರ್ನಾಟಕ ಸರ್ಕಾರ ಸಾವ್ಕಾಶ ನಿದ್ದಿಂದ ಕಣ್ಣ ತಿಕ್ಕೋತ ಎದ್ದ ಒಂದೊಂದ ಕನ್ನಡಾ ಸಾಲಿ ಚಾಲೂ ಮಾಡಿದ್ಮ್ಯಾಲನಅಲ ನಮ್ಮ ಭಾಷಾ ಉಸಲ ಹಿಡದ್ವಾಂಗ! ಈಗೆಲ್ಲಾ ಎಲ್ಲಾ ಕಡೆ ಕನ್ನಡಾ ಸಾಲಿ ಚಾಲೂ ಆಗ್ಯಾವು.

## ಬೆಳಗಾವಿ ಸಂಕೇಶ್ವರದ ಭಾಷಾ ಸೊಬಗು

ಶುಕ್ರ್ರಾರಕೊಮ್ಮಿ ನಮ್ಮೂರ ಸಂತಿ. ಸುತ್ತೂಕಡ್ಯಾಗಿನು ಅಂದಾಜು ಮೂವತ್ತ ಹಳ್ಳಿ ಮಂದಿ ಎಲ್ಲಾ ಬರೋದು ನಮ್ಮ ಊರಿಗಿನಅಲ. ದೊಡ್ಡ ಸಂತಿ. ಮದ್ಲೆಲ್ಲಾ ಎಣ್ಣೆ ಗಾಣ, ಕಬ್ಬಿನ ಗಾಣ ಆಡ್ತಿದ್ರು. ಸಾಲಿ ಕಲೀಲಾರ್ದ ಹಳ್ಳಿ ಹೆಂಗ್ಸರು ಸಂತಿ ಮಾಡುವಾಗ ಐವತ್ತರ ಮ್ಯಾಲಿನ ಸಂಖ್ಯಾ ಹೇಳೋದನಅಲ ಮಜಾ. ಆರವತ್ತಕ್ಕ ಮೂರಿಪ್ಪತ್ತ ಅನ್ನೋದು, ಎಪ್ಪತ್ತಕ್ಕ ಮೂರಿಪ್ಪತ್ತರ ಹತ್ತ ಅನ್ನೋದು, ಎಂಬತ್ತಕ್ಕ ನಾಕಿಪ್ಪತ್ತ ಅನ್ನೋದು, ತೊಂಬತ್ತಕ್ಕ ಹತ್ತ ಕಮಿ ನೂರ ಅನ್ನೋದು ಹೀಂಗ ಎಲ್ಲಾ ಹೇಳಿ ಲೆಕ್ಕಾ ಮಾಡ್ತಿದ್ರು.

ರಸ್ತೆದಾಗ ಹೋಗೂವಾಗ ಯಾರರೆ ಮುಂದ ಬಂದ್ರ 'ಯಾನಾ? ಯಾನ ನಡದೇತಿ? ಎಲ್ಲಾ ಠೀಕಾ?' ಅಂತ ಕೇಳೋದು ಮಾಮೂಲಿ. ಆ ಕಡೀಂದ ಅವ್ರೂಭೀ 'ಎಲ್ಲಾ ಆರಾಮ ನೋಡಪಾ. ಆಂತ, ಹ್ಯಾಂಗ ಐತಿ ಪೀಕ? ಭಮ್ಮುಕ ಧಾರಣಿ ಬಿದ್ದೇತ್ಯಂತ. ಮುಂದ ಏರ್ತೇತ್ಯೋ ಇಲ್ಲೋ ಯಾಂಬಲ (ಯಾಂವ ಬಲ್ಲ)' ಅಂತೆಲ್ಲಾ ಮಾತು

ಸಂಕೇಶ್ವರದ ನಾರಾಯಣ ದೇವಸ್ಥಾನ

